**<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂರವರ ನ್ಯಾಯಾಲಯ, ಪೊನ್ನಂಪೇಟೆ.</u>**

**<u>ಸಿ.ಸಿ.ನಂ.498/2026</u>**

**ಪಿರ್ಯಾದಿ** : ರಾಜ್ಯ ಸರ್ಕಾರ,
ಗೋಣಿಕೊಪ್ಪ ಪೋಲೀಸ್ ಠಾಣೆ.

**ವಿರುದ್ದ**

**ಆರೋಪಿ** : ಶ್ರೀ ಬಸವಂತಪ್ಪ ತಡಸಿನಕೊಪ್ಪ,
ತಂದೆಃ ಶಿವಪ್ಪ,
ಪ್ರಾಯ 46 ವರ್ಷ
ವಾಸಃ ಮಟಗನಕೊಪ್ಪ, ಕಲಗಟಗಿ ತಾಲ್ಲೂಕು,
ದಾರವಾಡ.

**<u>ಆರೋಪಣೆ</u>**

ಶ್ರೀ ಶ್ರೀನಾಥ್ ಎ,. ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ಆದ ನಾನು ಆರೋಪಿತರಾದ ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆಃ

ದಿನಾಂಕ 17.01.2026 ರಂದು ಸಮಯ ಬೆಳಗಿನ ಜಾವ 12.50 ಗಂಟೆಗೆ ಗೋಣಿಕೊಪ್ಪ ಪೋಲೀಸ್ ಠಾಣಾ ಸರಹದ್ದಿಗೆ ಸೇರಿದ ದೇವರಪುರ ಗ್ರಾಮದಲ್ಲಿ ಟಿ.ಆರ್ ಚಂಗಪ್ಪರವರ ಕಾಫಿ ತೋಟದ ಮುಂಭಾಗದ ಮೈಸೂರು ತಲಚ್ಚೇರಿ ರಾಜ್ಯ ಹೆದ್ದಾರಿಯಲ್ಲಿ ಸಾಕ್ಷಿ 2 ಅಂಕನಾಯಕ ರವರು ರಸ್ತೆಯ ಅಂಚಿನಲ್ಲಿ ನಿಂತುಕೊಂಡಿರುವಾಗ, ಆರೋಪಿಯಾದ ನೀವು ನೊಂದಣಿಯಾಗದ ಟಾಟಾ ಕಂಪನಿಗೆ ಸೇರಿದ ಕೆಎ.51.ಟಿಸಿ.004 ತಾತ್ಕಲಿಕ ನೊಂದಣಿಯ 12 ಚಕ್ರದ ಹೊಸ ಟಿಪ್ಪರ್ ವಾಹನವನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ರಸ್ತೆಯ ಅಂಚಿನಲ್ಲಿ ನಿಂತುಕೊಂಡಿದ್ದ ಸಾಕ್ಷಿ 2 ರವರಿಗೆ ಟಿಪ್ಪರಿನ ಎಡ ಭಾಗದ ಹಿಂಬದಿಯ ಕಬ್ಬಿಣದ ಭಾಗವನ್ನು ಡಿಕ್ಕಿ ಪಡಿಸಿ ಅಪಘಾತ ಪಡಿಸಿರುತ್ತೀರಿ ಎಂಬುದಾಗಿರುತ್ತದೆ, ಆ ಕಾರಣ ಬಿ.ಎನ್.ಎಸ್ ಕಲಂ 281 ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಎರಡನೆಯದಾಗಿ, ಮೇಲೆ ಹೇಳಲಾದ ದಿನ, ಸ್ಥಳ, ಸಮಯ ಮತ್ತು ಸಂದರ್ಭದಲ್ಲಿ ಆರೋಪಿಯಾದ ನೀವು ಸದರಿ ಅಪಘಾತ ಪಡಿಸಿದ ಪರಿಣಾಮ ಸಾಕ್ಷಿ 2 ರವರ ತಲೆಯ ಭಾಗಕ್ಕೆ ಗಂಭೀರ ಸ್ವರೂಪದ ಗಾಯಗಳಾಗಿರುತ್ತವೆ. ಆ ಕಾರಣ ಬಿ.ಎನ್.ಎಸ್ ಕಲಂ 125(ಬಿ) ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಕೊನೆಯದಾಗಿ, ಮೇಲೆ ಹೇಳಲಾದ ದಿನ, ಸ್ಥಳ, ಸಮಯ ಮತ್ತು ಸಂದರ್ಭದಲ್ಲಿ ಆರೋಪಿಯಾದ ನೀವು ಸದರಿ ಅಪಘಾತ ಪಡಿಸಿದ ನಂತರ ಸಾಕ್ಷಿ 2 ರವರಿಗೆ ಚಿಕಿತ್ಸೆಯನ್ನು ಕೊಡಿಸದೆ, ಹತ್ತಿರದ ಪೋಲೀಸ್ ಠಾಣೆಗೆ ಯಾವುದೇ ಮಾಹಿತಿಯನ್ನು ನೀಡದೆ ವಾಹನವನ್ನು ನಿಲ್ಲಿಸದೆ ಹೋಗಿರುವ ಕಾರಣ ಮೋಟಾರು ವಾಹನ ಕಾಯ್ದೆ 187 ಸಹವಾಚಕ 134(ಎ)(ಬಿ) ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಪ್ರಶ್ನೆ 1: ನಿಮಗೆ ಓದಿ ಹೇಳಲಾದ ಆರೋಪವನ್ನು ಅರ್ಥಮಾಡಿಕೊಂಡಿದ್ದೀರಾ?

ಉತ್ತರ : ಅರ್ಥವಾಯಿತು.

ಪ್ರಶ್ನೆ 2: ನಿಮ್ಮ ಮೇಲೆ ಹೊರಿಸಲಾದ ಆರೋಪವನ್ನು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆಯಾಗಲೇಬೇಕೆ?

ಉತ್ತರ: ತಪ್ಪಾಯಿತು, ದಂಡ ಕಟ್ಟುತ್ತೇನೆ.

ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ನನ್ನ ಸಮಕ್ಷಮ ಓದಿ ಹೇಳಿ ಅವರ ಹೇಳಿಕೆಯನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ದೃಢೀಕರಿಸುತ್ತೇನೆ.

ಸ್ಥಳಃ ಪೊನ್ನಂಪೇಟೆ,
ದಿಃ-12-06-2026

Sd/-
**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ**
**ಪೊನ್ನಂಪೇಟೆ.**